# ಕ್ರಿಸ್ ಗೇಲ್ 'ಮಾನ' ನಷ್ಟ?

ಸೆಲೆಬ್ರಿಟಿಗಳೆಂದರೆ ಮಾರಾಟದ ಸರಕು. ಅವರ ಮಾತು, ಅವರ ನಗು, ಅಳು ಎಲ್ಲವೂ ಮಾರಾಟದ ಸರಕೇ. ವೆಸ್ಟ್ ಇಂಡೀಸ್‌ನ ಕ್ರಿಕೆಟಿಗ ಕ್ರಿಸ್ ಗೇಲ್‌ಗೆ ಇದು ಚೆನ್ನಾಗಿ ಗೊತ್ತು. ಹಾಗೆಂದೇ ಆತ ತನಗೆ ಸಿಕ್ಕಿರುವ ಸೆಲೆಬ್ರಿಟಿ ಸ್ಥಾನಮಾನದ ಪ್ರತಿಯೊಂದು ನಿಮಿಷವನ್ನೂ ಪರಿಪೂರ್ಣವಾಗಿ ಆನಂದಿಸುತ್ತಿದ್ದಾನೆ. ಆಸ್ಟ್ರೇಲಿಯಾದ ಮಾಧ್ಯಮ ಸಂಸ್ಥೆಯೊಂದರ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನು ಗೆದ್ದ ಬಳಿಕದ ಆತನ ನಡವಳಿಕೆಯೂ ಇದನ್ನೇ ಸ್ಪಷ್ಟಪಡಿಸಿದೆ.

ಈ ಮಾನನಷ್ಟ ಮೊಕದ್ದಮೆಗೂ ಒಂದು ಹಿನ್ನೆಲೆ ಇದೆ. ಕಳೆದ ವರ್ಷ ಜನವರಿಯಲ್ಲಿ ಕ್ರಿಸ್ ಗೇಲ್ ಕ್ರಿಕೆಟ್ ಆಡಲು ಆಸ್ಟ್ರೇಲಿಯಾಕ್ಕೆ ಹೋಗಿದ್ದ. ಪಂದ್ಯವಿದ್ದ ದಿನ ವೆಸ್ಟ್ ಇಂಡೀಸ್ ತಂಡದ ಮಸಾಜ್ ಥೆರಪಿಸ್ಟ್, ಲಿಯಾನ್ ರಸೆಲ್ ಟವೆಲ್ ಒಂದನ್ನು ಹುಡುಕಿಕೊಂಡು ಡ್ರೆಸಿಂಗ್ ರೂಮ್‌ಗೆ ಹೋದಳಂತೆ. ಡ್ರೆಸಿಂಗ್ ರೂಮ್‌ನಲ್ಲಿ ಕ್ರಿಸ್ ಗೇಲ್ ಬರಿಮೈಯಲ್ಲಿ ಒಂದು ಟವೆಲ್ ಮಾತ್ರ ಸೊಂಟಕ್ಕೆ ಕಟ್ಟಿಕೊಂಡು ನಿಂತಿದ್ದನಂತೆ. ರಸೆಲ್ ಹುಡುಕುವುದನ್ನು ಕಂಡು ನಗುತ್ತಲೇ– 'ನೀನು ಇದನ್ನು ಹುಡುಕುತ್ತಿದ್ದೀಯಾ..' ಎಂದು ಉಟ್ಟ ಟವೆಲನ್ನು ಬಿಚ್ಚಿ ಆಕೆಯ ಮೇಲೆ ಎಸೆದನಂತೆ.

'ಆತನ ಗುಪ್ತಾಂಗವನ್ನು ತೋರಲೆಂದೇ ಆತ ಹಾಗೆ ಮಾಡಿದ. ನಾನು ಗೊಂದಲಗೊಂಡು ತಕ್ಷಣ ಕೋಣೆಯಿಂದ ಹೊರಗೆ ಬಂದೆ' ಎನ್ನುವುದು ರಸೆಲ್ ಹೇಳಿಕೆ. ಆಕೆಯ ಹೇಳಿಕೆಯನ್ನು 'ಸಿಡ್ನಿ ಮಾರ್ನಿಂಗ್ ಹೆರಾಲ್ಡ್', 'ದಿ ಏಜ್' ಮತ್ತು 'ದಿ ಕ್ಯಾನ್‌ಬೆರಾ ಟೈಮ್ಸ್' ಪತ್ರಿಕೆಗಳು ಪ್ರಕಟಿಸಿದವು. ಮಾತ್ರವಲ್ಲ ವಾರವಿಡೀ ಈ ಬಗ್ಗೆ ವಿಶೇಷ ವರದಿ, ವಿಶ್ಲೇಷಣೆ, ಟೀಕೆ ಟಿಪ್ಪಣಿಗಳನ್ನು ಪ್ರಕಟಿಸಿದವು. 'ಇಂತಹ ಘಟನೆ ನಡೆದೇ ಇಲ್ಲ' ಎಂದು ಕ್ರಿಸ್ ಗೇಲ್ ಆ ಪತ್ರಿಕಾ ಸಂಸ್ಥೆಯ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ. ಡ್ರೆಸಿಂಗ್ ರೂಮ್‌ನಲ್ಲಿದ್ದ ಸಹ ಆಟಗಾರ ಡ್ವೇನ್ ಸ್ಮಿತ್, ಕ್ರಿಸ್ ಗೇಲ್ ಪರವಾಗಿ ಸಾಕ್ಷಿ ನೀಡಿದ. ಕೋರ್ಟಿನ ಕಟಕಟೆಯಲ್ಲಿ ಕಣ್ಣೀರು ಹಾಕಿಕೊಂಡು ನಡೆದಿರುವುದು ನಿಜ ಎಂದು ಲಿಯಾನ್ ರಸೆಲ್ ಹೇಳಿದರೂ ನ್ಯಾಯಾಧೀಶರು ನಂಬಲಿಲ್ಲ. ತೀರ್ಪು ಗೇಲ್ ಪರವಾಗಿ ಬಂತು.

ಇದಾಗಿ ವಾರದ ಬಳಿಕ ಇದೀಗ ಕ್ರಿಸ್ ಗೇಲ್‌ನ ಟ್ವಿಟ್ಟರ್ ಖಾತೆಯ ಹೇಳಿಕೆ ಮತ್ತೊಂದು ದೊಡ್ಡ ಸುದ್ದಿಯಾಗಿದೆ. 'ಈ ಮಾನನಷ್ಟ ಘಟನೆಯ ಬಗ್ಗೆ ನನ್ನಲ್ಲಿ ಹೇಳಲು ಸಾಕಷ್ಟು ಕುತೂಹಲಕರ ಕಥೆಗಳಿವೆ. ಈ ಘಟನೆಯ ಹಿಂದೆ ಯಾರಿದ್ದಾರೆ, ನಿಜಕ್ಕೂ ಏನು ನಡೆಯಿತು, ಆ ಬಳಿಕ ಏನೆಲ್ಲಾ ಆಯಿತು.. ಎಲ್ಲವನ್ನೂ ಹೇಳುವೆ. ಯಾವುದೇ ಮಾಧ್ಯಮಕ್ಕೆ ಅರ್ಧ ಗಂಟೆ ಸಂದರ್ಶನ ನೀಡಲು ನಾನು ಸಿದ್ಧ. ಕೇವಲ 3 ಲಕ್ಷ ಪೌಂಡ್ ಸಂಭಾವನೆ ನೀಡಿದರೆ ಸಾಕು' ಎನ್ನುವುದು ಆತನ ಟ್ವಿಟ್ಟರ್ ಸಾರ. ಅಂದ ಹಾಗೆ ಕ್ರಿಸ್ ಗೇಲ್‌ಗೆ ಟ್ವಿಟ್ಟರ್‌ನಲ್ಲಿ 37.50 ಲಕ್ಷ ಫಾಲೋವರ್‌ಗಳಿದ್ದಾರೆ. ಗೇಲ್ ಹೇಳಿಕೆ 'ವೈರಲ್' ಆಗಿದೆ.

ಗೇಲ್ ಕುರಿತ ಇಂತಹ ವರದಿಗಳು ಪ್ರಕಟವಾಗುವುದು ಇದೇ ಮೊದಲಲ್ಲ. ಹಿಂದೊಮ್ಮೆ ಆಸ್ಟ್ರೇಲಿಯಾ ಟಿವಿ ಕಾಮೆಂಟ್ರೇಟರ್ ಒಬ್ಬಳಿಗೆ, 'ಬಾ ಹೊರಗೆ ಹೋಗಿ ಕುಡಿಯೋಣ. ಸುಮ್ಮನೆ ತರಲೆ ಮಾಡಬೇಡ ಬೇಬಿ' ಎಂದು ಆಹ್ವಾನಿಸಿದ್ದ ಬಗ್ಗೆಯೂ ಹೀಗೆಯೇ ಸುದ್ದಿಯಾಗಿತ್ತು. ತನ್ನ ದೈತ್ಯಕಾಯದ ಬಗ್ಗೆ, ಸಹಸ್ರಾರು ಮಹಿಳೆಯರು ತನ್ನ ಅಭಿಮಾನಿಗಳಾಗಿರುವುದರ ಬಗ್ಗೆ ಈ ಹಿಂದೆಯೂ ಗೇಲ್ ಮಾತನಾಡಿದ್ದು ವರದಿಯಾಗಿದೆ. ಬ್ರಿಟಿಷ್ ಪತ್ರಕರ್ತೆ ಚಾರ್ಲೋಸ್ ಎಡ್ವರ್ಡ್ಸ್ ಕೂಡಾ ಇಂತಹದ್ದೊಂದು ಆರೋಪ ಮಾಡಿದ್ದಳು. 'ಆತ ನನ್ನ ಜತೆ ಅಸಭ್ಯವಾಗಿ ಮಾತನಾಡಿದ. – ನನ್ನ ಬ್ಯಾಟ್ ತುಂಬ ದೊಡ್ಡದಿದೆ. ಅದನ್ನು ಎತ್ತಬೇಕಿದ್ದರೆ ನೀನು ಎರಡೂ ಕೈಗಳನ್ನು ಬಳಸಬೇಕು. ನೀನು ಎಷ್ಟು ಮಂದಿ ಕರಿಯರ ಜೊತೆಗೆ ಹೋಗಿದ್ದೀಯ...– ಎಂದೆಲ್ಲ ಆತ ಮಾತನಾಡಿದ್ದಾನೆ' ಎಂದು ಚಾರ್ಲೋಸ್ ಹೇಳಿದ್ದೂ ವಿವಾದ ಸೃಷ್ಟಿಸಿತ್ತು.

ಕ್ರಿಸ್ ಗೇಲ್ ಹೆಣ್ಣುಗಳ ಶೋಕಿಯಿರುವ ಕ್ರಿಕೆಟಿಗ ಎನ್ನುವ ಅಭಿಪ್ರಾಯ ಕ್ರಿಕೆಟ್ ವಲಯದಲ್ಲಿ ಪದೇ ಪದೇ ಕೇಳಿಸುತ್ತಿದೆ. ಆದರೆ ಈ ಕುರಿತು ಆತನ ಗೆಳೆಯರು ಮಂಡಿಸುವ ವಾದವೇ ಬೇರೆಯೇ ಇದೆ. 'ಗೇಲ್ ಒಬ್ಬ ಜಾಲಿ ಮನುಷ್ಯ. ಸದಾ ಖುಷಿಯಾಗಿ ತಮಾಷೆ ಮಾಡುತ್ತಾ ಇರುತ್ತಾನೆ. ಆತನ ತಮಾಷೆಯ ಮಾತುಗಳಿಗೆಲ್ಲ ಆಗದವರು ತಪ್ಪು ಅರ್ಥ ಕಲ್ಪನೆ ಮಾಡಿಕೊಳ್ಳುತ್ತಾರೆ. ಇತ್ತೀಚೆಗಂತೂ ಆತ ಹೆಣ್ಣು ಮಕ್ಕಳು ಸುತ್ತ ಇದ್ದರೇ ಗಾಬರಿ ಬೀಳುತ್ತಾನೆ' ಎನ್ನುತ್ತಾರೆ ಗೆಳೆಯರು.

ಗೇಲ್ ಇವತ್ತು ಜನಪ್ರಿಯತೆಯಲ್ಲಿ ಈ ಮಟ್ಟಕ್ಕೆ ಬೆಳೆಯಲು ಆತನ ಸಾಧನೆಗಳೇ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಜನಪ್ರಿಯನಾಗಲು ಆತನಿಗೆ ವಿವಾದಗಳ ಅಗತ್ಯ ಇಲ್ಲ ಎನ್ನುವುದೂ ನಿಜ. ಟಿ20 ಪಂದ್ಯದಲ್ಲಿ 30 ಎಸೆತಗಳಲ್ಲಿ ಶತಕ ಬಾರಿಸಿದ್ದು, 66 ಎಸೆತಗಳಲ್ಲಿ ಅಜೇಯ 175 ರನ್ ಹೊಡೆದದ್ದು, ಐಪಿಎಲ್ ಪಂದ್ಯದ ಒಂದೇ ಇನಿಂಗ್ಸ್‌ನಲ್ಲಿ ಅತ್ಯಧಿಕ ಸಿಕ್ಸರ್‌ಗಳನ್ನು ಬಾರಿಸಿದ್ದು, ಟೆಸ್ಟ್ ಪಂದ್ಯದಲ್ಲಿ ಮೊದಲ ಎಸೆತವನ್ನೇ ಸಿಕ್ಸರ್‌ಗೆ ಅಟ್ಟಿದ್ದು– ಹೀಗೆ ಆತನ ದಾಖಲೆಗಳೆಲ್ಲ ಇನ್ನೊಬ್ಬ ಬ್ಯಾಟ್ಸ್‌ಮನ್ ಮುರಿಯಲು ಕಷ್ಟವಾಗುವಂತಹದ್ದೇ.

ಹಾಗಿದ್ದೂ ಹೆಣ್ಣುಮಕ್ಕಳಿಗೆ ಸಂಬಂಧಿಸಿ ಹೀಗೆ ಪೋಲಿ, ಪೆಕರನಂತೆ ಮಾತನಾಡುವುದರ ಮೂಲಕ ಗೇಲ್ ಏನು ಹೇಳಹೊರಟಿದ್ದಾನೆ.. ಎನ್ನುವ ಪ್ರಶ್ನೆ ಸಹಜವೇ. ಈಗ ತನ್ನ ಮಾನನಷ್ಟದ ಕುರಿತ ಸ್ವಾರಸ್ಯಕರ ಕಥೆ ಹೇಳಲು ಇಂತಿಷ್ಟು ದುಡ್ಡು ಕೊಡಿ ಎಂದಿರುವುದೂ ಆತನ ಪ್ರಚಾರದ ಹಪಾಹಪಿತನ ಎನ್ನಬಹುದು. ಸೆಲೆಬ್ರಿಟಿಗಳು ಸಂದರ್ಶನ ಕೊಡಲು ಶುಲ್ಕ ವಿಧಿಸುವುದು ಹೊಸತೇನಲ್ಲ. ಆದರೆ ಅದೆಲ್ಲ ಆಯಾ ಮಾಧ್ಯಮದ ಜತೆಗೆ ಕುಳಿತು ಪರಸ್ಪರ ಮಾತನಾಡಿ ಒಪ್ಪಂದ ಮಾಡಿಕೊಳ್ಳುವ ಸಂಗತಿ. ಹೀಗೆ ಟ್ವಿಟ್ಟರ್ ಗೋಡೆಯ ಮೇಲೆ ಢಾಣಾಡಂಗುರ ಸಾರುವ ಸಂಗತಿಯಲ್ಲ ಎನ್ನುವುದನ್ನು ಗೇಲ್‌ಗೆ ಯಾರು ಹೇಳಿಕೊಡಬೇಕು? ■




Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65